# ಕರ್ನಾಟಕ ಸರ್ಕಾರ

ಸಂಖ್ಯೆ ಇಡಿ 160 ಟಿಜಿಎಲ್ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 27.6.2015

***ನ್ಯಾಯಾಲಯ ಪ್ರಕರಣ***
***ತುರ್ತು***

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಉನ್ನತ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ:

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

PS / LC / Reg (Ad)
03/07/15

ಮಾನ್ಯರೆ,

ವಿಷಯ:- ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಹಲವು ವಿಷಯಗಳ ಸಂಬಂಧವಾಗಿ ಕರ್ನಾಟಕ ಆಡಳಿತ ನ್ಯಾಯಮಂಡಳ, ರಾಜ್ಯ ಉಚ್ಚ ನ್ಯಾಯಾಲಯಗಳಲ್ಲಿ ನ್ಯಾಯಾಲಯ ನಿಂದನಾ ಪ್ರಕರಣಗಳು ದಾಖಲಾಗುತ್ತಿರುವ ಬಗ್ಗೆ.

----

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಹಲವು ವಿಷಯಗಳ ಸಂಬಂಧವಾಗಿ ಇತ್ತೀಚೆಗೆ ಕರ್ನಾಟಕ ಆಡಳಿತ ನ್ಯಾಯಮಂಡಳ, ರಾಜ್ಯ ಉಚ್ಚ ನ್ಯಾಯಾಲಯಗಳಲ್ಲಿ ನ್ಯಾಯಾಲಯ ನಿಂದನಾ ಪ್ರಕರಣಗಳು ದಾಖಲಾಗುತ್ತಿರುವುದನ್ನು ಗಮನಿಸಲಾಗಿದೆ. ನ್ಯಾಯಾಲಯಗಳು ನೀಡಿರುವ ತೀರ್ಪುಗಳನ್ನು ನಿಯಮಾನುಸಾರ ಸಕಾಲದಲ್ಲಿ ಪರಿಶೀಲಿಸಿ ಕ್ರಮ ಕೈಗೊಂಡಲ್ಲಿ ನಿಂದನಾ ಪ್ರಕರಣಗಳು ಉದ್ಭವಿಸುವುದಿಲ್ಲ. ಕರ್ನಾಟಕ ಆಡಳಿತ ನ್ಯಾಯ ಮಂಡಳ ಹಾಗೂ ರಾಜ್ಯ ಉಚ್ಚ ನ್ಯಾಯಾಲಯಗಳು ನೀಡುವ ತೀರ್ಪನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರದಿಂದ ನಿರ್ದೇಶನ ನೀಡಲಾಗುತ್ತಿದೆ. ಆದಾಗ್ಯೂ ಸಹ ಸಕಾಲದಲ್ಲಿ ನ್ಯಾಯಾಲಯಗಳು ನೀಡಿರುವ ತೀರ್ಪುಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳದೆ ಇದ್ದುದರಿಂದ ಸಂಬಂಧಪಟ್ಟ ಅರ್ಜಿದಾರರುಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳ ಹಾಗೂ ರಾಜ್ಯ ಉಚ್ಚ ನ್ಯಾಯಾಲಯಗಳಲ್ಲಿ ನಿಂದನಾ ಅರ್ಜಿಗಳನ್ನು ಸಲ್ಲಿಸುವ ಪ್ರಸಂಗ

315
9.7.15

PS 586
3/7/15

ಉದ್ಭವವಾಗುತ್ತಿದೆ. ಆದುದರಿಂದ ಸರ್ಕಾರದಿಂದ ಸೂಚನೆ ನೀಡಲ್ಪಟ್ಟ ನ್ಯಾಯಾಲಯ ಪ್ರಕರಣಗಳಲ್ಲಿ ಹಾಗೂ ನೇರವಾಗಿ ನ್ಯಾಯಾಲಯಗಳೇ ಇಲಾಖಾ ಮುಖ್ಯಸ್ಥರುಗಳು ಹಾಗೂ ಅವರುಗಳ ಅಧೀನದಲ್ಲಿ ಬರುವ ಪ್ರಾಧಿಕಾರಗಳಿಗೆ ಖುದ್ದಾಗಿ ಪ್ರತಿವಾದಿಗಳನ್ನಾಗಿ ಮಾಡಿರುವಂತಹ ಎಲ್ಲಾ ಪ್ರಕರಣಗಳಲ್ಲಿಯೂ ನ್ಯಾಯಾಲಯ ನಿರ್ದೇಶನವನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕೆಂದು. ಕಟ್ಟುನಿಟ್ಟಿನ ಸೂಚನೆ ನೀಡಲು ಹಾಗೂ ಅಗತ್ಯ ಕ್ರಮ ವಹಿಸಲು ವಿಫಲವಾದಲ್ಲಿ ನಿಂದನಾ ಪ್ರಕರಣಗಳಿಗೆ ತಮ್ಮನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದೆಂದು ಸಹ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಬಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ ಶಿಕ್ಷಣ)

ಹಿಂಬರಹ ಸಂಖ್ಯೆ: ಡಿಟಿಇ 27 ಕಾಘ 2014 / 1571 / ದಿ:31-07-2015

ಮೇಲ್ಕಂಡ ಸರ್ಕಾರದ ಪತ್ರದಲ್ಲಿನ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪರಿಪಾಲಿಸುವಂತೆ ತಿಳಿಸುತ್ತಾ ತಪ್ಪಿದ್ದಲ್ಲಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳನ್ನೇ ನೇರ ಹೊಣೆ ಮಾಡಲಾಗುವುದು ಎಂದು ತಿಳಿಸಿದೆ.

ನಿರ್ದೇಶಕರು

ಇವರಿಗೆ,

(1) ಜಂಟಿ ನಿರ್ದೇಶಕರು-ಆಡಳಿತ, ಪರೀಕ್ಷೆ, ಯೋಜನೆ, ಸಿಡಿಸಿ & ತನಿಖೆ
(2) ಉಪನಿರ್ದೇಶಕರು- ಪರೀಕ್ಷೆ, ಯೋಜನೆ, ಸಿಡಿಸಿ & ತನಿಖೆ
(3) ಸಹಾಯಕ ನಿರ್ದೇಶಕರು-ಎಸಿಎಂ,ಪರೀಕ್ಷೆ, ಯೋಜನೆ & ಸಿಡಿಸಿ
(4) ಆಡಳಿತಾಧಿಕಾರಿ
(5) ಸಹಾಯಕ ಆಡಳಿತಾಧಿಕಾರಿ- 1, 2 & 3
(6) ರಿಜಿಸ್ಟ್ರಾರ್-ಆಡಳಿತ, ಪರೀಕ್ಷೆ , ಎಸಿಎಂ ಮತ್ತು ಇಎಸ್‌ಟಿ(4)
(7) ಸಾರ್ವಜನಿಕ ಸಂಪರ್ಕಧಿಕಾರಿ
(8) ನಿರ್ದೇಶನಾಲಯದ ಎಲ್ಲಾ ವಿಭಾಗಗಳ ಕಾರ್ಯನಿರ್ವಾಹಕರುಗಳಿಗೆ/ಅಧೀಕ್ಷಕರುಗಳಿಗೆ
(9) ಪ್ರಾಚಾರ್ಯರು- ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು/ಕಿರಿಯ ತಾಂತ್ರಿಕ ಶಾಲೆಗಳು ಹಾಗೂ ಚಿತ್ರಕಲಾ ಮಹಾವಿದ್ಯಾಲಯ
(10) ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಇ-ಗೌರ್ನೆಸ್ ವಿಭಾಗಕ್ಕೆ
(11) ಕಛೇರಿ ಪ್ರತಿ